Phone No.: 0831-2565203, 206, 234

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY,

Vidya Sangama, National Highway – 04, Belagavi - 591156

E-mail: rcuregistrar@gmail.com ಕುಲಸಚಿವರ ಕಾರ್ಯಾಲಯ Website: www.rcub.ac.in

ಪತ್ರ ಸಂ: ರಾಚವಿ/ಬೆಳಗಾವಿ/ಕುಸಕಾ/2016–17/ 5060 ದಿನಾಂಕ: 05 FEB 2016

ಇವರಿಗೆ,
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಳಗಾವಿ ವಿಭಾಗ
ಬೆಳಗಾವಿ.

ಮಾನ್ಯರೆ,

ವಿಷಯ : ಬೆಳಗಾವಿ ತಾಲೂಕಿನ ಭೂತರಾಮನಹಟ್ಟಿ ಗ್ರಾಮದ ರ.ಸ.ನಂ.1:1 ರಲ್ಲಿನ 178 ಎಕರೆ 14 ಗುಂಟೆ ಜಮೀನಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು 10 ಪ್ರತಿಗಳಲ್ಲಿ ಸಲ್ಲಿಸುವ ಕುರಿತು.

ಉಲ್ಲೇಖ: ದಿನಾಂಕ : 13-07-2013 ರಂದು ಸಲ್ಲಿಸಿದ 10 ಪ್ರತಿ.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜಮೀನು ಮೀಸಲು ಅರಣ್ಯವಿದ್ದು, ಸದರಿ ಜಮೀನನ್ನು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ದಿನಾಂಕ:31-09-1990 G.O. No.:RD62LGL 89, ಬೆಂಗಳೂರು ರಂದು ಮಂಜೂರಾಯಿತು. ಸದರಿ ಜಮೀನಿನ ಘಟನೋತ್ತರ ಮಂಜೂರಾತಿಯನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕೆಂಬ ತಮ್ಮ ನಿರ್ದೇಶನದಂತೆ ಸದರಿ 178 ಎಕರೆ 14 ಗುಂಟೆ ಜಮೀನು ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ: 13-07-2013 ರಂದು ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಯಲ್ಲಿ Form No.-II ಪ್ರಮಾಣಪತ್ರ ಇಲ್ಲದೇ ಇರುವ ಕಾರಣ ಹಾಗೂ 178 ಎಕರೆ 14 ಗುಂಟೆ ಜಮೀನಿನ ಗಡಿಭಾಗವನ್ನು ಸರಿಯಾಗಿ ಗುರುತು ಕಲ್ಲುಗಳಿಂದ ಗುರುತಿಸದ ಕಾರಣ, ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿತ್ತು.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಮಾಣ್ಯ ಜಿಲ್ಲಾಧಿಕಾರಿಗಳಿಂದ ದಿನಾಂಕ:19-01-2015 ರಂದು Form No.-II ಪಡೆಯಲಾಗಿದೆ. ನಂತರ ವಲಯ ಅರಣ್ಯ ಅಧಿಕಾರಿಗಳು, ಕಾಕತಿ ಹಾಗೂ ಭೂಮಾಪನ ವಿಭಾಗ, ಬೆಳಗಾವಿ ಇವರ ಸಂಯೋಜನೆಯೊಂದಿಗೆ ಜಂಟಿ ಸರ್ವೆ ಕಾರ್ಯವನ್ನು ಕೈಗೊಂಡು 178 ಎಕರೆ 14 ಗುಂಟೆ ಜಮೀನಿನ ಗಡಿಭಾಗವನ್ನು ಗುರುತಿಸಿ ಹೊಸದಾಗಿ ಗುರುತಿನ ಕಲ್ಲುಗಳನ್ನು ಹಾಕಲಾಗಿದೆ.

ಸದರಿ ಕಾರ್ಯಗಳನ್ನು ಕೈಗೊಳ್ಳುವುದರೊಂದಿಗೆ ಪ್ರಸ್ತಾವನೆಯು ಪೂರ್ಣಗೊಂಡಿದ್ದು, ಸದರಿ ಪ್ರಸ್ತಾವನೆಯ 10 ಪ್ರತಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

5/2/16
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

ಪ್ರತಿ ಮಾಹಿತಿಗಾಗಿ :

1. ಮಾನ್ಯ ಕುಲಪತಿಗಳು, ರಾಚವಿ, ಬೆಳಗಾವಿ
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವಿಭಾಗ, ಬೆಳಗಾವಿ.

5/2/2016
ಸ್ವೀಕೃತಿ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವಿಭಾಗ, ಬೆಳಗಾವಿ

Phone No.: 0831-2565203, 206, 234

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY,

Vidya Sangama, National Highway – 04, Belagavi - 591156

E-mail: rcuregistrar@gmail.com ಕುಲಸಚಿವರ ಕಾರ್ಯಾಲಯ Website: www.rcub.ac.in

ಪತ್ರ ಸಂ: ರಾಚವಿ/ಬೆಳಗಾವಿ/ಕುಸಕಾ/2016–17/2392 ದಿನಾಂಕ: 16 AUG 2016

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಬೆಳಗಾವಿ ಜಿಲ್ಲೆ
ಬೆಳಗಾವಿ.

ಮಾನ್ಯರೆ,

ವಿಷಯ : ಬೆಳಗಾವಿ ತಾಲೂಕಿನ ಭೂತರಾಮನಹಟ್ಟಿ ಗ್ರಾಮದ ರ.ಸ.ನಂ.1:1 ರಲ್ಲಿನ 178 ಎಕರೆ 14 ಗುಂಟೆ ಜಮೀನಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಪ್ರಸ್ತಾವನೆಯ ಒಂದು ಪ್ರತಿಯನ್ನು ಸಲ್ಲಿಸುವ ಕುರಿತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜಮೀನು ಕೇಂದ್ರ ಮೀಸಲು ಅರಣ್ಯ ಪ್ರದೇಶವಿದ್ದು, ಸದರಿ ಜಮೀನನ್ನು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ದಿನಾಂಕ: 31-01-1990 ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ-62/ಎಲ್‌ಜಿಎಲ್-89/ ಬೆಂಗಳೂರು ದಂದು ಮಂಜೂರಾಗಿತ್ತು. ಸದರಿ ಜಮೀನಿನ ಘಟನೋತ್ತರ ಮಂಜೂರಾತಿಯನ್ನು ಕೇಂದ್ರ ಸರ್ಕಾರದಿಂದ ಪಡೆಯಬೇಕೆಂದು ವಲಯ ಅರಣ್ಯಾಧಿಕಾರಿಗಳ ನಿರ್ದೇಶನದಂತೆ, ಸದರಿ 178 ಎಕರೆ 14 ಗುಂಟೆ ಜಮೀನಿನ ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ: 05-02-2016ರಂದು ವಲಯ ಅರಣ್ಯಾಧಿಕಾರಿಗಳು, ಕಾಕತಿ ವಲಯ, ಇವರಿಗೆ 10 ಪ್ರತಿಯನ್ನು ಸಲ್ಲಿಸಲಾಗಿದೆ.

ಮುಂದುವರೆದು, ಸದರಿ ಪ್ರತಿಗಳ ಒಂದು ಪ್ರತಿಯನ್ನು ತಮ್ಮ ಕಛೇರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸುತ್ತಿದ್ದೇವೆ.

ವಂದನೆಗಳೊಂದಿಗೆ,

ಕುಲಸಚಿವರು
16/8/16

17/8/16
ಸ್ವೀಕೃತ ಸಹಾಯಕ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ
(INWARD)

Phone No.: 0831-2565203, 206, 234

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY,

**Vidya Sangama, National Highway – 04, Belagavi - 591156**

E-mail: rcuregistrar@gmail.com ಕುಲಸಚಿವರ ಕಾರ್ಯಾಲಯ Website: www.rcub.ac.in

ಸಂ:ರಾಚವಿವಿ/ಬೆಳಗಾವಿ/ಕುಸಕಾ/2016–17/ 2410 ದಿನಾಂಕ: 17–8–2016 17 AUG 2016

**ಇವರಿಗೆ,**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು**
**ಅರಣ್ಯ ಇಲಾಖೆ**
**18ನೇ ಕ್ರಾಸ್, ಮಲ್ಲೇಶ್ವರಂ**
**ಬೆಂಗಳೂರು–560003**

**ಮಾನ್ಯರೆ,**

**ವಿಷಯ** : ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 174.18 ಎಕರೆ ಜಮೀನು ಅರಣ್ಯ ಇಲಾಖೆಯಿಂದ ವಿಶ್ವವಿದ್ಯಾಲಯದ ಹೆಸರಿಗೆ ವರ್ಗಾವಣೆ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 174.18 ಎಕರೆ ಜಮೀನು ಅರಣ್ಯ ಇಲಾಖೆಯಿಂದ ವಿಶ್ವವಿದ್ಯಾಲಯದ ಹೆಸರಿಗೆ ವರ್ಗಾವಣೆ ಮಾಡುವ ಕುರಿತು, ಬೆಳಗಾವಿಯ ವಿಭಾಗೀಯ ಅರಣ್ಯ ಅಧಿಕಾರಿಗಳ ಮುಖಾಂತರ ಪ್ರಸ್ತಾವನೆಯನ್ನು ಆರು ಪ್ರತಿಗಳಲ್ಲಿ ತಮ್ಮ ಇಲಾಖೆಗೆ ಸಲ್ಲಿಸಲಾಗಿದೆ.

ಮುಂದುವರೆದು, ಪ್ರಸ್ತಾವನೆಯು ತಮ್ಮ ಇಲಾಖೆಗೆ ಮುಟ್ಟಿದ ಕುರಿತು ಸ್ವೀಕೃತಿ ಪತ್ರವನ್ನು ನೀಡಲು ಈ ಮೂಲಕ ವಿನಂತಿಸಲಾಗಿದೆ.

ವಂದನೆಗಳೊಂದಿಗೆ,

18/8/16

ತಮ್ಮ ವಿಶ್ವಾಸಿ,

17/8/2016

**(ಡಾ. ಎಸ್. ಎಲ್. ಬೆಳಗಲಿ)**
**ಕುಲಸಚಿವರು**